# ಉಪ್ಪು-ಸಾಸಿವೆ, ತೆಂಗಿನಕಾಯಿ, ಲಿಂಬೆ ಇತ್ಯಾದಿಗಳಿಂದ ದೃಷ್ಟಿ ಹೇಗೆ ತೆಗೆಯಬೇಕು?

## 卐 ‘ದೃಷ್ಟಿ’ಯ ಬಗ್ಗೆ ಸಾರ್ವತ್ರಿಕ ಮನೋಗತ 卐

ಮಕ್ಕಳಿಗೆ ದೃಷ್ಟಿ ತಗಲಬಾರದೆಂದು ಕಾಡಿಗೆಯನ್ನು ಹಚ್ಚುವ ಸಂಸ್ಕಾರವು ಇಂದಿಗೂ ನಡೆದುಕೊಂಡು ಬಂದಿದೆ. ಕೆಲವು ವಯಸ್ಸಾದ ಸ್ತ್ರೀಯರು ಮನೆಗೆ ಬಂದಿರುವ ನೆಂಟರ ಮೇಲಿನಿಂದ ಇಂದಿಗೂ ನಿಂಬೆ-ಉಪ್ಪುಗಳಿಂದ ದೃಷ್ಟಿಯನ್ನು ತೆಗೆಯುತ್ತಾರೆ. ಯಾವಾಗ ಒಂದು ಪರಂಪರೆಯನ್ನು ನೂರಾರು ವರ್ಷಗಳವರೆಗೆ ಕಾಪಾಡಿಕೊಂಡು ಬರುತ್ತಾರೆಯೋ, ಆಗ ಅದರ ಹಿಂದೆ ನಿಶ್ಚಿತವಾಗಿ ಏನಾದರೊಂದು ಶಾಸ್ತ್ರವಿದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು.

ಇಂದಿನ ಸ್ಪರ್ಧಾತ್ಮಕ ಮತ್ತು ಭೋಗವಾದಿ ಯುಗದಲ್ಲಿ ವೈರತ್ವ, ದ್ವೇಷಭಾವ, ಲೋಕೇಷಣ, ಹೆಣ್ಣುಮಕ್ಕಳ ಕಡೆಗೆ ನೋಡುವ ಕೆಟ್ಟ ದೃಷ್ಟಿ ಇತ್ಯಾದಿ ವಿಕೃತಿಗಳಿಗೆ ಬಹುತೇಕ ಜನರು ತೊಂದರೆಗೀಡಾಗಿದ್ದಾರೆ. ಈ ವಿಕೃತಿಗಳ ರಜ-ತಮಾತ್ಮಕ ಸ್ಪಂದನಗಳ ತ್ರಾಸ ದಾಯಕ ಪರಿಣಾಮವು ಸೂಕ್ಷ್ಮದಲ್ಲಿ ನಮಗೆ ತಿಳಿಯದೇ ಬೇರೆ ವ್ಯಕ್ತಿಗಳ ಮೇಲೆ ಆಗುತ್ತದೆ. ಇದನ್ನೇ ಆ ವ್ಯಕ್ತಿಗೆ ‘ದೃಷ್ಟಿ ತಗಲಿದೆ’ ಎಂದು ಹೇಳುತ್ತಾರೆ. ಅಲ್ಲದೇ ಕುಟುಂಬಗಳಲ್ಲಿನ ಜಗಳಗಳು, ರೋಗಗಳು, ಹಣಕಾಸಿನ ತೊಂದರೆ, ಕೆಟ್ಟ ಕನಸುಗಳು ಬೀಳುವುದು, ನಿರಾಶೆ, ಸಿಗರೇಟು ಅಥವಾ ಮದ್ಯಪಾನದ ವ್ಯಸನ ಇತ್ಯಾದಿ ಸಮಸ್ಯೆಗಳು ಈಗ ನಿತ್ಯದ ವಿಷಯಗಳಾಗಿವೆ. ಜೀವನದಲ್ಲಿನ ಶೇ. ೮೦ ರಷ್ಟು ಸಮಸ್ಯೆಗಳ ಹಿಂದಿನ ಕಾರಣಗಳು ಸ್ಥೂಲದಲ್ಲಿ ಕಂಡುಬಂದರೂ, ಅವುಗಳ ಮೂಲ ಕಾರಣವು ಸೂಕ್ಷ್ಮದಲ್ಲಿನ, ಅಂದರೆ ಕೆಟ್ಟ ಶಕ್ತಿಗಳ ತೊಂದರೆಗಳಿಂದಲೇ ಆಗಿರುತ್ತದೆ. ಕೆಟ್ಟ ಶಕ್ತಿಗಳ ತೊಂದರೆಯೂ ಸಹ ದೃಷ್ಟಿ ತಗಲುವ ಒಂದು ಪ್ರಕಾರವೇ ಆಗಿದೆ.

ಸ್ವಲ್ಪದರಲ್ಲಿ ಹೇಳುವುದಾದರೆ, ಜೀವನದಲ್ಲಿ ನಮಗೆ ತೊಂದರೆಗಳು ಬರಬಾರದು ಮತ್ತು ನಾವು ಆನಂದದಲ್ಲಿ ಇರಬೇಕೆಂದಾದರೆ, ಮನೆಯಲ್ಲಿ ಸುಲಭವಾಗಿ ಮಾಡಬಹುದಾದ ದೃಷ್ಟಿಯನ್ನು ತೆಗೆಯುವ ಆಧ್ಯಾತ್ಮಿಕ ಉಪಾಯವನ್ನು ಮಾಡುವುದು ಉಪಯುಕ್ತವಾಗಿದೆ. ಸದ್ಯದ ವಿಜ್ಞಾನಯುಗದಲ್ಲಿ ‘ದೃಷ್ಟಿ ತಗಲುವುದು ಮತ್ತು ತೆಗೆಯುವುದು’ ಈ ಶಬ್ದಗಳನ್ನು ಉಚ್ಚರಿಸಿ ದರೂ ಬುದ್ಧಿಜೀವಿಗಳು ಅದನ್ನು ‘ಹಳೆಯ ಪದ್ಧತಿ’ ಎಂದು ಹೀಯಾಳಿಸಿ ಮೂಗು ಮುರಿಯ ಬಹುದು. ಇಂದಿನ ವಿಜ್ಞಾನಯುಗದಲ್ಲಿ ಪ್ರತಿಯೊಂದು ವಿಷಯವನ್ನು ಶಾಸ್ತ್ರೀಯವಾಗಿ ತಿಳಿಸಿ ಹೇಳಿದರೆ ಅದರ ಮೇಲೆ ವಿಶ್ವಾಸವಿಡುತ್ತಾರೆ. ಆದುದರಿಂದ ದೃಷ್ಟಿಯ ೨ ಖಂಡದಲ್ಲಿ ದೃಷ್ಟಿ ತಗಲುವ ಪ್ರಕ್ರಿಯೆ, ಅದರ ಪರಿಣಾಮ, ಬೇರೆ ಬೇರೆ ವಸ್ತುಗಳಿಂದ ದೃಷ್ಟಿ ತೆಗೆಯುವ ಪದ್ಧತಿ, ಚಿಕ್ಕ ಮಕ್ಕಳ ದೃಷ್ಟಿ ತೆಗೆಯುವ ಸುಲಭ ಪದ್ಧತಿ, ದೃಷ್ಟಿ ತೆಗೆಯುವಾಗ ವಹಿಸಬೇಕಾದ ಜಾಗ್ರತೆ ಇತ್ಯಾದಿ ವಿಷಯಗಳನ್ನು ತಿಳಿಸಿ ಹೇಳುವುದರೊಂದಿಗೆ ಸ್ಥೂಲದಿಂದ ತಿಳಿಯದಿರುವ ವಿಷಯಗಳನ್ನು ಸೂಕ್ಷ್ಮಪರೀಕ್ಷಣೆ ಮತ್ತು ಸೂಕ್ಷ್ಮಜ್ಞಾನದ ಚಿತ್ರಗಳಿಂದ ಸ್ಪಷ್ಟಪಡಿಸಲಾಗಿದೆ.

ಸನಾತನದ ಸಾಧಕರು ಸಮಷ್ಟಿ ಸಾಧನೆಯನ್ನು ಮಾಡಿ ‘ಈಶ್ವರೀ ರಾಜ್ಯ’ವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾರೆ ಮತ್ತು ಕೆಟ್ಟ ಶಕ್ತಿಗಳು ‘ಅಸುರೀ ರಾಜ್ಯ’ವನ್ನು ಸ್ಥಾಪಿಸಲು

ಪ್ರಯತ್ನಿಸುತ್ತಿವೆ. ಆದುದರಿಂದ ಕೆಟ್ಟ ಶಕ್ತಿಗಳು ಸಾಧಕರಿಗೆ ದೊಡ್ಡ ಪ್ರಮಾಣದಲ್ಲಿ ವಿವಿಧ ರೀತಿಯಲ್ಲಿ ತೊಂದರೆಗಳನ್ನು ನೀಡುತ್ತಿವೆ. ಸನಾತನದ ಸಾಧಕರಿಗಾಗುತ್ತಿರುವ ಕೆಟ್ಟ ಶಕ್ತಿಗಳ ತೊಂದರೆಗಳನ್ನು ಕಡಿಮೆಗೊಳಿಸಲು ಸನಾತನವು ಕ್ರಿ.ಶ. ೨೦೦೧ ರಿಂದ ಸಾಧಕರ ದೃಷ್ಟಿಯನ್ನು ತೆಗೆಯಲು ಪ್ರಾರಂಭಿಸಿತು. ಸಾಧಕರ ದೃಷ್ಟಿಯನ್ನು ತೆಗೆಯುವ ಮೊದಲಿದ್ದ ಸ್ಥಿತಿ, ದೃಷ್ಟಿ ತೆಗೆದ ನಂತರ ಅವರ ಮೇಲಾದ ಪರಿಣಾಮ ಹಾಗೂ ಅವರಿಗಾದ ಲಾಭ ಇದನ್ನು ಸಾಧಕರ ಅನುಭೂತಿಗಳ ಮಾಧ್ಯಮದಿಂದ ವಿವರಿಸಲಾಗಿರುವುದರಿಂದ ದೃಷ್ಟಿ ತೆಗೆಯುವ ಪದ್ಧತಿಯು ಶಾಸ್ತ್ರೋಕ್ತವಾಗಿದೆ ಎಂದು ಪ್ರಮಾಣಸಹಿತ ಸಿದ್ಧವಾಗುತ್ತದೆ.

ಆದಷ್ಟು ಹೆಚ್ಚು ಜನರು ದೃಷ್ಟಿಯನ್ನು ತೆಗೆಯುವ ಮಹತ್ವವನ್ನು ಅರಿತುಕೊಂಡು, ದೃಷ್ಟಿಯನ್ನು ತೆಗೆಸಿಕೊಂಡು ತಮ್ಮ ಸುತ್ತಲೂ ನಿರ್ಮಾಣವಾಗಿರುವ ತೊಂದರೆದಾಯಕ ಸ್ಪಂದನಗಳ ಆವರಣವನ್ನು ದೂರಗೊಳಿಸಿಕೊಂಡು ಸಾಧನೆಯಿಂದ ಬ್ರಹ್ಮಾಂಡದಲ್ಲಿನ ಈಶ್ವರೀ ಲಹರಿಗಳ ಲಾಭವನ್ನು ಪಡೆದುಕೊಳ್ಳಬೇಕೆಂದು ಶ್ರೀಗುರುಚರಣಗಳಲ್ಲಿ ಪ್ರಾರ್ಥನೆ !

- ಸಂಕಲನಕಾರರು

**ಧರ್ಮದ ಅಧ್ಯಯನಕಾರರಲ್ಲಿ ವಿನಂತಿ**

## ‘ಗ್ರಂಥದಲ್ಲಿ ಮುದ್ರಿಸಿದ ಸಾಧಕರಿಗೆ ಸಿಗುವ ವಿನೂತನ ಜ್ಞಾನವು ಯೋಗ್ಯವೋ ಅಯೋಗ್ಯವೋ ?, ಹಾಗೆಯೇ ಸಾಧಕರಿಗೆ ಸಿಗುವ ವೈಶಿಷ್ಟ್ಯಪೂರ್ಣ ಅನುಭೂತಿ’ ಇವುಗಳ ಅಧ್ಯಯನ ಮಾಡಲು ಸಹಾಯ ಮಾಡಿ !

‘ಇಂದಿನವರೆಗೆ ಯುಗಯುಗಗಳಲ್ಲಿನ ಧರ್ಮಗ್ರಂಥಗಳಲ್ಲಿ ಸಿಗದ ವಿನೂತನ ಜ್ಞಾನವು ಈಶ್ವರನ ಕೃಪೆಯಿಂದ ಸನಾತನದ ಕೆಲವು ಸಾಧಕರಿಗೆ ಸಿಗುತ್ತಿದೆ. ಈ ಜ್ಞಾನವು ಹೊಸದಾಗಿರುವುದರಿಂದ ಹಳೆಯ ಗ್ರಂಥಗಳ ಆಧಾರವನ್ನು ಕೊಟ್ಟು ಜ್ಞಾನವು ‘ಯೋಗ್ಯವೋ ಅಯೋಗ್ಯವೋ ?’ ಎಂದು ಹೇಳಲು ಆಗುವುದಿಲ್ಲ. ‘ಆ ಜ್ಞಾನವು ಯೋಗ್ಯವೋ ಅಯೋಗ್ಯವೋ ?’ ಎಂಬುದರ ಬಗ್ಗೆ, ಹಾಗೆಯೇ ಸಾಧಕರಿಗೆ ಬರುವ ವೈಶಿಷ್ಟ್ಯಪೂರ್ಣ ಅನುಭೂತಿಗಳ ಬಗ್ಗೆ (ಉದಾ. ಉಚ್ಚಲೋಕ, ಪಂಚಮಹಾಭೂತಗಳು ಇವುಗಳ ಬಗೆಗಿನ ಅನುಭೂತಿಗಳ ಸಂದರ್ಭದಲ್ಲಿ) ಧರ್ಮದ ಅಧ್ಯಯನಕಾರರು ನಮಗೆ ಮಾರ್ಗದರ್ಶನ ಮಾಡಿದಲ್ಲಿ ಮನುಕುಲಕ್ಕೆ ನೂತನ ಯೋಗ್ಯ ಜ್ಞಾನದ ಲಾಭವಾಗುವುದು. ಅಷ್ಟೇ ಅಲ್ಲ, ‘ಅಯೋಗ್ಯವೇನು ?’ ಎಂಬುದೂ ತಿಳಿಯುತ್ತದೆ. ಇದಕ್ಕಾಗಿ ನಾವು ಧರ್ಮದ ಅಧ್ಯಯನಕಾರರಿಗೆ ಇದರ ಬಗ್ಗೆ ನಮಗೆ ಮಾರ್ಗದರ್ಶನ ಮಾಡಬೇಕೆಂದು ವಿನಂತಿಸುತ್ತೇವೆ.’

- ಪ್ರಕಾಶಕರು

**ಒಂದೇ ವಿಷಯದ ಬಗೆಗಿನ ಸನಾತನದ ಗ್ರಂಥಗಳನ್ನು ಅಖಂಡವಾಗಿ ಇಡದೆ ಅವುಗಳನ್ನು ೨-೩ ಭಾಗಗಳಾಗಿ ವಿಂಗಡಿಸುವ ಹಿಂದಿನ ಉದ್ದೇಶ !**

ಒಂದೇ ವಿಷಯದ ಗ್ರಂಥವನ್ನು ಅಖಂಡವಾಗಿಡದೇ ಅದನ್ನು ೨-೩ ಭಾಗಗಳಲ್ಲಿ ವಿಂಗಡಿಸಿರುವುದರಿಂದ ಮುಂದೆ ಗ್ರಂಥದ ವಿಷಯಗಳನ್ನು ವಿಸ್ತರಿಸುವಾಗ ಪುಟಗಳ ಸಂಖ್ಯೆ ಹೆಚ್ಚಾಗಬಹುದು ಎಂಬ ಚಿಂತೆಯಿರುವುದಿಲ್ಲ. ಆರ್ಥಿಕವಾಗಿ ಚಿಕ್ಕಚಿಕ್ಕ ಗ್ರಂಥಗಳನ್ನು ಕೊಳ್ಳಲು ಹೆಚ್ಚಿನವರಿಗೆ ಸುಲಭವಾಗುತ್ತದೆ. ಇಂತಹ ಗ್ರಂಥಗಳನ್ನು ಇತರರಿಗೆ ಉಡುಗೊರೆಯಾಗಿ ಕೊಡಲು ಅಥವಾ ಗ್ರಂಥಕ್ಕೆ ಪ್ರಾಯೋಜಕರನ್ನಾಗಿ ಮಾಡಲೂ ಅನುಕೂಲಕರವಾಗಿದೆ. ವಾಚಕರು ಇದರ ಉದ್ದೇಶವನ್ನು ಅರಿತುಕೊಂಡು ಸಹಕರಿಸಬೇಕಾಗಿ ವಿನಂತಿ. - **ಪ್ರಕಾಶಕರು**

---

## ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


**೧. 'ದೃಷ್ಟಿ ತಗಲುವುದು' ಎಂದರೇನು ? ೧೮**

**೨. ದೃಷ್ಟಿ ತಗಲುವುದರ ಹಿಂದಿನ ಸೂಕ್ಷ್ಮದಲ್ಲಿನ ಪ್ರಕ್ರಿಯೆ ೧೯**

**೩. ದೃಷ್ಟಿ ತಗಲಿದುದರ ಪರಿಣಾಮ ಅಥವಾ ದೃಷ್ಟಿ ತಗಲಿದೆ ಎಂಬುದನ್ನು ಗುರುತಿಸುವ ಲಕ್ಷಣಗಳು ೧೯**

೩ ಅ. ಸ್ಥೂಲದೇಹ, ಮನೋದೇಹ, ಸೂಕ್ಷ್ಮದೇಹಗಳಿಗೆ ಸಂಬಂಧಿಸಿದ ಲಕ್ಷಣಗಳು ೧೯

೩ ಆ. ಕೆಲವು ಸಮಸ್ಯೆಗಳ ಲಕ್ಷಣಗಳು (ಶಾರೀರಿಕ, ಮಾನಸಿಕ ಇತ್ಯಾದಿ ಸಮಸ್ಯೆ) ೨೧

**೪. 'ದೃಷ್ಟಿಯನ್ನು ತೆಗೆಯುವುದು' ಎಂದರೇನು ? ೨೨**

**೫. ದೃಷ್ಟಿಯನ್ನು ತೆಗೆಯುವುದರಿಂದಾಗುವ ಲಾಭಗಳು ೨೩**

೫ ಅ. ದೃಷ್ಟಿಯನ್ನು ತೆಗೆಯುವುದರಿಂದ ಜೀವದ ಮನಃಶಕ್ತಿಯು ಬಲಶಾಲಿಯಾಗುತ್ತದೆ, ಇದರಿಂದ ಕಾರ್ಯದಲ್ಲಿ ವಿಘ್ನಗಳು ಬರುವುದಿಲ್ಲ ೨೩

೫ ಆ. ದೃಷ್ಟಿ ತೆಗೆಯುವುದರಿಂದ ದೃಷ್ಟಿಯ / ಮಾಟದ ತೀವ್ರತೆಯು ತಿಳಿಯುತ್ತದೆ ೨೩

**೬. ದೃಷ್ಟಿಯನ್ನು ತೆಗೆಯುವಾಗ ಜೀವದ ಭಾವ ಮಹತ್ವದ್ದಾಗಿದೆ ೨೩**

೬ ಅ. ದೃಷ್ಟಿಯನ್ನು ತೆಗೆಸಿಕೊಳ್ಳುವ ವ್ಯಕ್ತಿಯ ಭಾವ ಹೇಗಿರಬೇಕು ? ೨೩

೬ ಆ. ದೃಷ್ಟಿಯನ್ನು ತೆಗೆಯುವ ವ್ಯಕ್ತಿಯ ಭಾವ ಹೇಗಿರಬೇಕು ? ೨೪

೬ ಇ. ದೃಷ್ಟಿಯನ್ನು ತೆಗೆಯುವಾಗ ಇಬ್ಬರೂ ಭಾವವನ್ನಿಟ್ಟುಕೊಂಡರೆ ಆಗುವ ಲಾಭಗಳು ೨೪

**೭. ದೃಷ್ಟಿ ತೆಗೆಯುವ ವ್ಯಕ್ತಿಯ ಮೇಲೆ ದೃಷ್ಟಿ ದೂರವಾಗುವ ಫಲನಿಷ್ಪತ್ತಿಯು ಅವಲಂಬಿಸಿರುವುದು ೨೪**

**೮. ದೃಷ್ಟಿಯನ್ನು ತೆಗೆಯುವ ಪದ್ಧತಿ (ಕೇವಲ ಕೃತಿ) ೨೬**

**೯. ದೃಷ್ಟಿಯನ್ನು ತೆಗೆಯುವ ಪದ್ಧತಿಯ ಹಿಂದಿನ ಶಾಸ್ತ್ರ ಮತ್ತು ಅನುಭೂತಿಗಳು ೨೯**

* ದೃಷ್ಟಿಯನ್ನು ತೆಗೆಯುವ ಮೊದಲು, ದೃಷ್ಟಿ ತೆಗೆಯುವ ಮತ್ತು ದೃಷ್ಟಿಯನ್ನು ತೆಗೆಸಿಕೊಳ್ಳುವ ವ್ಯಕ್ತಿಯು ಪ್ರಾರ್ಥನೆಯನ್ನು ಏಕೆ ಮಾಡಬೇಕು ? ೨೯
* ದೃಷ್ಟಿ ತೆಗೆಸಿಕೊಳ್ಳುವ ವ್ಯಕ್ತಿಯು ತನ್ನ ಎರಡೂ ಕೈಗಳ ಅಂಗೈಗಳನ್ನು ಮೇಲಿನ (ಆಕಾಶದ) ದಿಕ್ಕಿನಲ್ಲಿ ಏಕೆ ತೆರೆದಿಡಬೇಕು ? ೨೯
* ದೃಷ್ಟಿಯನ್ನು ತೆಗೆದು ಹೋಗುವಾಗ ದೃಷ್ಟಿಯನ್ನು ತೆಗೆದವನು ಏಕೆ ಹಿಂತಿರುಗಿ ನೋಡಬಾರದು ? ೩೦

**೧೦. ದೃಷ್ಟಿಯನ್ನು ತೆಗೆಯಲು ಉಪಯೋಗಿಸುವ ಘಟಕಗಳು (ಉಪ್ಪು, ಸಾಸಿವೆ, ಕೆಂಪು ಮೆಣಸಿನಕಾಯಿ, ಲಿಂಬೆಕಾಯಿ, ತೆಂಗಿನಕಾಯಿ ಇತ್ಯಾದಿ) ಮತ್ತು ಅವುಗಳಿಂದ ದೃಷ್ಟಿಯನ್ನು ತೆಗೆಯುವ ವಿವಿಧ ವಿಧಗಳು ೩೩**

**೧೧. ದೃಷ್ಟಿ ತಗಲದಿರಲು ಸತತವಾಗಿ ಸಾಧನೆಯನ್ನು ಮಾಡುವುದೇ ನಿಜವಾದ ಉಪಾಯವಾಗಿದೆ ೭೦**

卐 **‘ಕರ್ಪೂರ, ಕಪ್ಪು ಉದ್ದು, ವೀಳ್ಯದೆಲೆ ಇತ್ಯಾದಿಗಳಿಂದ ದೃಷ್ಟಿ ಹೇಗೆ ತೆಗೆಯಬೇಕು ?’ ಗ್ರಂಥದ ಸಂಕ್ಷಿಪ್ತ ಪರಿವಿಡಿ ೭೧**


## ತಾಮಸಿಕ (ಅಸುರೀ) ಚಿತ್ರಗಳ ಸುತ್ತಲೂ ನಾಮಜಪದ ಚೌಕಟ್ಟನ್ನು, ಅಂದರೆ ಮಂಡಲವನ್ನು ಹಾಕುವುದರ ಕಾರಣ

ತ್ರಾಸದಾಯಕ ಶಕ್ತಿಗಳ ಚಿತ್ರಗಳಿಂದಲೂ ಕಪ್ಪು ಶಕ್ತಿಯ ಪ್ರಕ್ಷೇಪಣೆಯಾಗುತ್ತದೆ. ಈ ತ್ರಾಸದಾಯಕ ಶಕ್ತಿಯಿಂದ ವಾಚಕರಿಗೆ ತೊಂದರೆಯಾಗಬಾರದೆಂದು ಸೂಕ್ಷ್ಮದಿಂದ ಆವಶ್ಯಕ ನಾಮಜಪವನ್ನು ಹುಡುಕಿ ಕೆಟ್ಟ ಶಕ್ತಿಯ ಚಿತ್ರದ ಸುತ್ತಲೂ ಆ ನಾಮಜಪದ ಮಂಡಲವನ್ನು ಹಾಕುವುದು ಆವಶ್ಯಕವಾಗಿದೆ.

**ಟಿಪ್ಪಣಿ :** ಗ್ರಂಥದಲ್ಲಿ ಬಹಳಷ್ಟು ಕಡೆಗಳಲ್ಲಿ ‘ಪ.ಪೂ. ಡಾ. ಆಠವಲೆ’ ಅಥವಾ ‘ಪ.ಪೂ. ಡಾಕ್ಟರ’ ಎಂಬ ಉಲ್ಲೇಖವಿದೆ, ಅದು ಗ್ರಂಥದ ಸಂಕಲನಕಾರರಾದ ಪರಾತ್ಪರ ಗುರು ಡಾ. ಜಯಂತ ಬಾಳಾಜಿ ಆಠವಲೆಯವರ ಬಗ್ಗೆ ಇದೆ. ೨. ಗ್ರಂಥದಲ್ಲಿನ ಕೆಲವು ಸೂಕ್ಷ್ಮಜ್ಞಾನದ ಚಿತ್ರಗಳಲ್ಲಿ ತೋರಿಸಿರುವ ವಿವಿಧ ಸ್ಪಂದನಗಳಿಂದಾಗಿ ಅದರ ಮೂಲಚಿತ್ರವು ಸುಸ್ಪಷ್ಟವಾಗಿ ಕಾಣಿಸುವುದಿಲ್ಲ. ಇಂತಹ ಮೂಲಚಿತ್ರಗಳನ್ನು ಸಂಬಂಧಪಟ್ಟ ಸೂಕ್ಷ್ಮಜ್ಞಾನದ ಚಿತ್ರದ ಮೊದಲು ಅಥವಾ ಚಿತ್ರದ ಬದಿಯಲ್ಲಿ ಕೊಡಲಾಗಿದೆ.